**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ ರವರು ನಿಯಮ-330 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ವಿಷಯ:** ಬೆಂಗಳೂರಿನ ಸಹಕಾರ ನಗರವು ಪ್ರತಿಷ್ಠಿತ ಬಡಾವಣೆಯಾಗಿದ್ದು, ಈ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೊಡಿಗೇಹಳ್ಳಿ ಪೊಲೀಸ್ ಠಾಣೆಯು ಪ್ರಸ್ತುತ ಸ್ವಂತ ಕಟ್ಟಡ ನಿರ್ಮಾಣ ಹೊಂದಲು ಸಹಕಾರ ನಗರದಲ್ಲಿ ಸಾಕಷ್ಟು ಬಿಬಿಎಂಪಿ ಸಾರ್ವಜನಿಕ ಬಳಕೆಯ ನಿವೇಶನಗಳು ಲಭ್ಯವಿದ್ದರೂ ಸಹ ಇದುವರೆವಿಗೆ ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ. ಪ್ರಸ್ತುತ ಈ ಠಾಣೆಯು ಕೊಡಿಗೇಹಳ್ಳಿಯ ಟ್ರಯೋ ಸ್ಕೂಲಿನ ಬಳಿ ಇರುವ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಜಪ್ತಿ ವಾಹನಗಳನ್ನು ಈ ಮುಖ್ಯ ರಸ್ತೆಯಲ್ಲಿಯೇ ಅಡ್ಡ-ದಿಡ್ಡಿಯಾಗಿ ನಿಲ್ಲಿಸಿದ್ದು, ಇದರಿಂದಾಗಿ ಸಂಚಾರ ದಟ್ಟಣೆ ಹಾಗೂ ಪಾದಚಾರಿಗಳಿಗೆ ಮತ್ತು ಮಕ್ಕಳಿಗೆ ತುಂಬಾ ಕಿರಿಕಿರಿ ಉಂಟಾಗುತ್ತಿದ್ದು, ಕೂಡಲೇ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಹಾಗೂ ಮುಖ್ಯರಸ್ತೆಯಿಂದ ಜಪ್ತಿ ವಾಹನಗಳನ್ನು ತೆರವುಗೊಳಿಸುವ ಕುರಿತು.

**ಉತ್ತರ**

1. ಕೊಡಿಗೇಹಳ್ಳಿ ಪೊಲೀಸ್ ಠಾಣೆಯು ಪ್ರಸ್ತುತ ಬಿ.ಬಿ.ಎಂ.ಪಿ ವತಿಯಿಂದ ಮಾರುತಿ ಸಮುದಾಯ ಭವನ (ಬಾಬು ಜಗಜೀವನ ರಾಮ್ ಭವನ) ವಾರ್ಡ್ ನಂ 08, ಮಾರುತಿನಗರ ಕೊಡಿಗೇಹಳ್ಳಿ ಮುಖ್ಯ ರಸ್ತೆ, ಕೊಡಿಗೇಹಳ್ಳಿ, ಇಲ್ಲಿನ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಸ್ಥಳದಲ್ಲಿ ಪಾರ್ಕಿಂಗ್‌ಗಾಗಿ ಜಾಗವಿರುವುದಿಲ್ಲ. ಕೊಡಿಗೇಹಳ್ಳಿ ಪೊಲೀಸ್ ಠಾಣೆಗೆ ನೂತನ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ಕೊಡಿಗೇಹಳ್ಳಿ ಕೋತಿ ಹೊಸಳ್ಳಿ ಗ್ರಾಮದ ಸರ್ವೆ ನಂಬರ್ 33/3 ಮತ್ತು 4, 34/1 ಮತ್ತು 2 ರಲ್ಲಿನ 11163.64 ಚದರ ಮೀಟರ್‌ಗಳ ಪೈಕಿ 4050 ಚದರ ಮೀಟರ್ ಸ್ಥಳವನ್ನು ಪೊಲೀಸ್ ಇಲಾಖೆಗೆ ಮಂಜೂರು ಮಾಡಿಕೊಡುವಂತೆ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ: ಸಿಒಪಿಬಿಸಿಪಿ/ಬಿಎಲ್‌ಡಿ(ಎಲ್‌ಪಿ)/7/2024, ದಿನಾಂಕ:22.11.2024ರಲ್ಲಿ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಪತ್ರ ವ್ಯವಹರಿಸಲಾಗಿದೆ. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಬೆಂ.ಅ.ಪ್ರಾ/ಆಯುಕ್ತರು/ಟಿ-284/2024-25 ದಿನಾಂಕ: 15.03.2025 ರಲ್ಲಿ ಕೋತಿ ಹೊಸಹಳ್ಳಿ ಗ್ರಾಮದ ಸರ್ವೆ ನಂ. 33/3, 33/4, 34/1 & 2 ರಲ್ಲಿ ಯಾವುದೇ ಜಾಗ ಕಂಡು ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.
2. ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ವಿವಿಧ ಪ್ರಕರಣಗಳಲ್ಲಿ ಈ ಕೆಳಕಂಡಂತೆ ವಶಪಡಿಸಿಕೊಂಡಿರುವ ವಾಹನಗಳನ್ನು ಯಲಹಂಕ ಉಪ ನಗರ ಪೊಲೀಸ್ ಠಾಣೆಯ ಆವರಣದಲ್ಲಿ ಪಾರ್ಕ್ ಮಾಡಲಾಗಿರುತ್ತದೆ. ಸಾರ್ವಜನಿಕರ ಸಂಚಾರಕ್ಕೆ ಅಡೆತಡೆಯಾಗುವಂತೆ ನಿಲ್ಲಿಸಿರುವುದಿಲ್ಲ.

| ಕ್ರ.ಸಂ | ವಾಹನದ ವಿಧ | ಸಂಖ್ಯೆ | ವಾಹನಗಳು ಇರುವ ಸ್ಥಳ | ಕಾರಣಗಳು |
|---|---|---|---|---|
| 1. | ದ್ವಿ-ಚಕ್ರ ವಾಹನಗಳು | 40 | ಯಲಹಂಕ ಉಪ ನಗರ ಪೊಲೀಸ್ ಠಾಣಾ ಆವರಣ | ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ವಾಹನಗಳ ವಿಚಾರಣೆಯು ಮಾನ್ಯ ನ್ಯಾಯಾಲಯದಲ್ಲಿ ಇರುವುದರಿಂದ & ಕೆಲವೊಂದು ಪ್ರಕರಣಗಳಲ್ಲಿ ವಾಹನದ ಮಾಲೀಕರು ವಾಹನವನ್ನು ತೆಗೆದುಕೊಂಡು ಹೋಗಲು ವಿಳಂಬ ಮಾಡುತ್ತಿರುವುದರಿಂದ ವಿಲೇವಾರಿ ಆಗದೇ ಬಾಕಿ ಉಳಿದಿರುತ್ತದೆ. |
| 2. | ತ್ರಿ-ಚಕ್ರ ವಾಹನಗಳು | 4 | | ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. |
| 3. | ನಾಲ್ಕು-ಚಕ್ರ ವಾಹನಗಳು | 6 | | ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. |
| 4. | ಆರು-ಚಕ್ರ ವಾಹನಗಳು | 0 | | 0 |
| | ಒಟ್ಟು | **50** | | |

3. ಸಂಚಾರ ಪೊಲೀಸ್ ಠಾಣೆಯವರು ರಸ್ತೆಯ ಎರಡು ಬದಿಗಳಲ್ಲಿ ಪಾರ್ಕಿಂಗ್ ಫಲಕಗಳನ್ನು ಅಳವಡಿಸಿದ್ದು, ಸಾರ್ವಜನಿಕರು ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ಪಾರ್ಕ್ ಮಾಡುತ್ತಾರೆ.

4. ಪೊಲೀಸ್ ಠಾಣೆಗಳಿಗೆ ದೂರು ನೀಡಲು ಬರುವ ಸಾರ್ವಜನಿಕರು ಮತ್ತು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ತರುವ ವಾಹನಗಳನ್ನು ಮಾತ್ರ ರಸ್ತೆಯ ಪಾರ್ಕಿಂಗ್ ಮಾಡಲು ಅಳವಡಿಸಿರುವ ಫಲಕಗಳ ಅನ್ವಯ ಪಾರ್ಕ್ ಮಾಡಲಾಗುತ್ತಿದೆ.

5. ಪೊಲೀಸ್ ಠಾಣೆಯ ಪಕ್ಕದಲ್ಲಿ ಮಾರಮ್ಮ ದೇವಸ್ಥಾನ ಮತ್ತು ಬೈಕ್ ಗ್ಯಾರೇಜ್ ಇರುತ್ತದೆ. ದೇವಸ್ಥಾನಕ್ಕೆ ಬರುವ ಸಾರ್ವಜನಿಕರು ತಮ್ಮ ವಾಹನಗಳನ್ನು & ಬೈಕ್ ಗ್ಯಾರೇಜ್‌ಗೆ ತಂದಿರುವ ವಾಹನಗಳನ್ನು ರಸ್ತೆಯ ಎರಡು ಬದಿಗಳಲ್ಲಿ ನಿಲ್ಲಿಸುತ್ತಾರೆ.

6. ಪೊಲೀಸ್ ಠಾಣೆ ಎದುರು ಟ್ರಿಯೋ ಇಂಟರ್ ನ್ಯಾಷನಲ್ ಶಾಲೆ ಇರುತ್ತದೆ. ಶಾಲೆಗೆ ಮಕ್ಕಳನ್ನು ಬಿಡಲು ಬರುವ ಪಾಲಕರು ತಮ್ಮ ವಾಹನಗಳನ್ನು ರಸ್ತೆಯ ಬದಿಗಳಲ್ಲಿ ನಿಲ್ಲಿಸುತ್ತಾರೆ ಮತ್ತು ಶಾಲೆಯ ಪಕ್ಕದಲ್ಲಿ ಸಾರ್ವಜನಿಕ ಬಸ್ ನಿಲ್ದಾಣವಿದ್ದು, ಕೆಲಸಕ್ಕೆ ಹೋಗುವ ಸಾರ್ವಜನಿಕರು ತಮ್ಮ ವಾಹನಗಳನ್ನು ಅಲ್ಲಿಯೇ ಪಾರ್ಕ್ ಮಾಡಿ ಕೆಲಸಗಳಿಗೆ ತೆರಳುತ್ತಾರೆ.

7. ಕೊಡಿಗೇಹಳ್ಳಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ವಾಣಿಜ್ಯ ಮಳಿಗೆಗಳು ಇದ್ದು, ಸದರಿ ಮಳಿಗೆಗಳ ಮಾಲೀಕರು ಸಹ ತಮ್ಮ ವಾಹನಗಳನ್ನು ರಸ್ತೆಯ ಎರಡು ಬದಿಗಳಲ್ಲಿ ನಿಲ್ಲಿಸುತ್ತಾರೆ.

ಕೊಡಿಗೇಹಳ್ಳಿ ಪೊಲೀಸ್ ಠಾಣೆಗೆ ಸ್ವಂತ ಕಟ್ಟಡ ಇಲ್ಲದೇ ಇದ್ದು, ಪ್ರಸ್ತುತ ಬಾಡಿಗೆ ಕಟ್ಟಡದಲ್ಲಿ ಕರ್ತವ್ಯನಿರ್ವಹಿಸುತ್ತಿದೆ. ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ವಾಹನಗಳನ್ನು ನಿಲ್ಲಿಸಲು ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ, ಜಪ್ತಿ ಮಾಡಿಕೊಂಡ ವಾಹನಗಳನ್ನು ಯಲಹಂಕ ಉಪ ನಗರ ಪೊಲೀಸ್ ಠಾಣೆಯ ಆವರಣದಲ್ಲಿ ನಿಲ್ಲಿಸಲಾಗಿರುತ್ತದೆ. ಇದರಿಂದಾಗಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ.

---

**ಹೆಚ್‌ಡಿ 446 ಎಸ್‌ಎಸ್‌ಟಿ 2026**

([illegible])
ಗೃಹ ಸಚಿವರು.